– ಈ ಎಲ್ಲ ಸಮಯದಲ್ಲೂ ದೇವರ ಹಾಡುಗಳನ್ನೂ ಹಾಡುತ್ತಲೇ ಇರುವ ಅವಳ ಕಾರ್ಯ ವೈಖರಿ ವಿಸ್ಮಯ ಹುಟ್ಟಿಸುವುದು. ಹಾಡು ಅಬ್ಬೆ ಹೋದಲ್ಲೆಲ್ಲ ಸಂಚರಿಸುವಂತೆ, ಅವಳ ಉಸಿರಾಗಿರುವಂತೆ ನನಗೆ ತೋರುತ್ತಿತ್ತು. ಅವರ ಮನೆಯಲ್ಲಿ ಅದೆಷ್ಟು ದಿನಗಳನ್ನು ಕಳೆದಿರುವೆನೋ! ಗದ್ದೆ ನೆಟ್ಟಿ, ಕೊಟ್ಟಿಗೆ ಕೆಲಸ, ತೋಟಕ್ಕೆ ನೀರು ಹಾಕುವುದು... ಇಂಥ ಅವೆಷ್ಟೋ ಚಟುವಟಿಕೆಗಳಲ್ಲಿ ಸದ್ದಿಲ್ಲದೆ ಅವಳ ದಿನ ಚಲಿಸುವುದು. ಒಂದರಲ್ಲೂ ಉದ್ವೇಗವಿಲ್ಲ. ಮಗ ನಿವೃತ್ತಿಯ ನಂತರ ಇಲ್ಲಿಗೆ ಬಾರದಿದ್ದರೂ ಅಬ್ಬೆ ಹೀಗೆಯೇ ಇರುತ್ತಿದ್ದಳು, ಬಂದುದರಿಂದ ಗೆಲುವಾದಳು ಎಂಬುದು ನಿಜ.

ಈ ಇಂಥ ಬದುಕಿನ ಅರ್ಥ ಏನು ಎಂದು ನನಗೆ ಸೋಜಿಗವಾಗುತ್ತದೆ. ಹೊರಗಿನಿಂದ ಬರುವ ಯಾರದೋ ಸಹಾಯದ ಮೇಲೆ ನಂಬಿಲ್ಲ, ದೈನಿಕದ ಸಾಮಾನ್ಯ ಕೆಲಸಗಳಿಗೂ ತಾವು ಕಷ್ಟಪಡುತ್ತಿದ್ದೇವೆ ಎಂಬ ಭಾವನೆ ಇಲ್ಲ, ಯಾರದಾದರೂ ಮೆಚ್ಚುಗೆಗೆ ಕಾದು ನಿರಾಶರಾಗುವುದೂ ಇಲ್ಲ. ತಮ್ಮಷ್ಟಕ್ಕೆ, ಕಾಡಿನ ಇನ್ನಿತರ ಯಾವುದೇ ಪ್ರಾಣಿಯಂತೆ ಬಾಳಿ ಒಂದು ದಿನ ಮಣ್ಣಲ್ಲಿ ಮಣ್ಣಾಗಿ ಹೋಗಿಬಿಡುವುದು... ಅಬ್ಬೆಗೆ ಇವೆಲ್ಲ ಪ್ರಶ್ನೆಯಾಗಿ, ಸಮಸ್ಯೆಯಾಗಿ ಕಾಡಿಲ್ಲ. ಸುಮ್ಮನೆ ಸಂತೋಷವಾಗಿ ಬಾಳುತ್ತ ಹೋಗುವುದರಲ್ಲೇ ಸುಖವಿದೆ ಎನ್ನುವಂತಿರುವ ಈ ಅಬ್ಬೆ 'ಲೋಕದ ಕಣ್ಣಲ್ಲಿ' ಬಿಂಬ ಅರಸುವ ನನಗೆ ಸವಾಲು, ಸೋಜಿಗ. 'ಅಬ್ಬೆ, ನೀನು ಮನಸಿಗೆ ಬಂದಿದ್ದು ಏನೇನೋ ನಿನ್ನದೇ ಸಾಲುಗಳನ್ನು ಸೇರಿಸಿ ಹಾಡು ಕಟ್ಟಿ ಹಾಡ್ತೆ, ಅದಕ್ಕೆಲ್ಲ ಕಾವ್ಯ ಮೀಮಾಂಸೆ ಓದಕಾಗ್ತು ಹೇಳಿ ಇವರು ಹೇಳ್ತಾರೆ. ಹುಷಾರು' ಎಂದು ರಾನಭ ನನ್ನ ಮಾತುಗಳನ್ನು ಒಂದು ವಿಲಕ್ಷಣ ಕ್ಷಣದಲ್ಲಿ ಫು ಮಾಡಿಬಿಟ್ಟರು. ಎಲ್ಲರೂ ಮನಸಾರೆ ನಕ್ಕೆವು.

ರಾನಭ ಅವರ ಹೊಸಬಗೆಯ ವಾನಪ್ರಸ್ಥಾಶ್ರಮ ಹೀಗೆ ಸಂತಸದಿಂದ ನಡೆಯುತ್ತಿರುವಾಗ ಈ ವರ್ಷದ ಕಾರ್ಗಾಲದ ನರ್ತನ ಶುರುವಾಯಿತು. ಅದರ ನೇತ್ರಾನಂದಕರ ಅವತರಣ, ಕರ್ಣಭೇದನಕರ ಗುಡುಗು, ಎದೆಯಲ್ಲೊಂದು ಛಳಕು ಹುಟ್ಟಿಸಿದ ಮಿಂಚಿನ ಮಾಯಾವಿಲಾಸ ಕಾಣುತ್ತ ಅವರು ಕಡೆಂಗೋಡ್ಲು ಶಂಕರಭಟ್ಟರ 'ಕಾರ್ಗಾಲದ ವೈಭವ' ಹಾಡಿಕೊಂಡು ಮಕ್ಕಳಂತೆ ಕುಣಿದರು. ಹಣ್ಣು ಮೀಸೆ ಗಡ್ಡದ ಮಗನ ಇಂಥ ಹುಚ್ಚಾಟಗಳು ಅಬ್ಬೆಗೆ ಹೊಸದಲ್ಲ. ದೊಡ್ಡ ಒಡೆದೀರಿಗೆ ಸಣ್ಣ ಪ್ರಮಾಣದ ಮರುಳು ಏನಾದರೂ ಇದ್ದೀತೇ ಎಂದು ಕೆಲವು ಹೊಸ ಕೆಲಸಗಾರರಿಗೆ ಸಂದೇಹ ಉಂಟಾಗಿದ್ದು ನಿಜ. ಯಾವುದಕ್ಕೂ ಸ್ವಲ್ಪ ದಿನ ಅವರ ಚೇರೆಲ್ಲ ಚಟುವಟಿಕೆಗಳನ್ನು ನೋಡಿ ನಿರ್ಧರಿಸಬೇಕೆಂದು ಮಾತಾಡಿಕೊಂಡರು.

ಬಿಡದೇ ಮಳೆ ಸುರಿಯುತ್ತ ಮೂರು ದಿನಗಳಾಗಿದ್ದವು. ಈ ಬೇಸಿಗೆಯಲ್ಲಿ ಅವರ ಊರಿನ ಒಂದು ಭೀಮಬಂಡೆಗೆ 'ಕವಿಶೈಲ' ಎಂದು ನಾಮಕರಣ ಮಾಡಿಕೊಂಡಿದ್ದರು. ನೇರ ಬಿಸಿಲು ತಲೆಗೆ ತಾಕದಿರಲೆಂದು ಅದರ ಸುತ್ತ ಮುಕ್ಕಾಲು ಗೋಡೆ ಕಟ್ಟಿ ತಲೆ ಮೇಲೆ ಹೆಂಚು ಹೊದೆಸಿ ಅಲ್ಲಿ ಬೆಳಿಗ್ಗೆ, ಸಂಜೆ ಕೂರುವುದನ್ನು ರೂಢಿ ಮಾಡಿಕೊಂಡಿದ್ದರು. ಕನ್ನಡ ಕವಿಗಳ ಎಷ್ಟೋ ಒಳ್ಳೊಳ್ಳೆಯ ಪದ್ಯಗಳನ್ನು ಅವರು ಅಲ್ಲಿ ಓದಿದ್ದಾರೆ. ಬಹಳ ಸಂತೋಷವಾದಾಗ ಗಟ್ಟಿದನಿಯಲ್ಲಿ ಆ ಪದ್ಯಗಳನ್ನು ಹತ್ತಿರದ ಗಿಡಮರಗಳಿಗೆ, ಹಕ್ಕಿಗಳಿಗೆ ಓದಿ ಹೇಳಿದ್ದಾರೆ. ಮಳೆ ಬಂದ ಮೇಲೆ ಒಂದೆರಡು ದಿನಗಳಿಂದ ಅತ್ತ ಹೋಗಿರಲಿಲ್ಲ. ಈ ದಿನ ಬೆಳಿಗ್ಗೆ ಅತ್ತ ಹೋಗುವ ಆಕರ್ಷಣೆ ತಪ್ಪಿಸಿಕೊಳ್ಳಲಾಗಲಿಲ್ಲ. ಶಂಕರ ಭಟ್ಟರ ಪದ್ಯವನ್ನು ಆ ಜಾಗದಲ್ಲಿ ಕುಳಿತು ಓದಬೇಕೆಂಬ ಉತ್ಸಾಹವೂ ಹೆಚ್ಚಿತು. ಸರಿ, ಕಂಬಳಿ ಕುಪ್ಪೆ, ಕೊಡೆ ಹಿಡಿದು ಹೊರಟೇ ಬಿಟ್ಟರು.

ಬಿರುಮಳೆಯ ಅಭ್ಯಂಜನದಿಂದ ಗಿಡಮರಗಳು ಸಂತೃಪ್ತವಾಗಿ ತೊನೆದಾಡುತ್ತಿದ್ದವು. ಕವಿಶೈಲದ ಇವರ ಅರೆಮನೆಯಲ್ಲಿ ಒಂದೆರಡು ಹಸುಗಳು ಬಾಲವಾಡಿಸುತ್ತ ನಿಂತಿದ್ದವು. ಸೂರ್ಯನ ದರ್ಶನವಿಲ್ಲದೆ ಇದು ನಾಲ್ಕನೇ ದಿನವೇ ಇರಬೇಕು. ಮುಂಜಾವಿಗೆ ಕತ್ತಲೆಯನ್ನು ಹಿಮ್ಮೆಟ್ಟಿಸಿದ ಹೆಮ್ಮೆಯಿಲ್ಲದ ಮಬ್ಬು ಮುಂಜಾವು. ಅಲ್ಲಿ ನಿಂತು ಸುಮಾರು ಹತ್ತು ಹದಿನೈದು ಕಿಲೋಮೀಟರ್ ದೂರದವರೆಗೂ ಗಿರಿಪಂಕ್ತಿಯ ಸಮಸ್ತ ನೋಟ ಪಡೆಯಬಹುದು. ತನ್ನಂಥ ಭಾಗ್ಯಶಾಲಿ ಯಾರಿದ್ದಾರೆ ಎಂದು ರಾನಭ ಮುದ ತಾಳಿದರು. ಇವೆಲ್ಲವೂ ತನ್ನವು, ತಾನು ಬೆಳೆದ, ತನ್ನ ತಂದೆ ತಾಯಿ ದಶಕಗಳಿಂದ ಇದ್ದು ತಮ್ಮದಾಗಿಸಿಕೊಂಡ ಸೃಷ್ಟಿಯ ಸಮೃದ್ಧಿ ಎಂದು ಮನಸು ಜಿಂಕೆಯಂತೆ ಕುಣಿಯತೊಡಗಿತು. ದಿನದ ಬೇರೆ ಬೇರೆ ಗಳಿಗೆಗಳಲ್ಲಿ ಇಲ್ಲಿಯ ನೋಟವನ್ನು